ಗೌರಿಬಿದನೂರು ತಾಲ್ಲೂಕಿನಲ್ಲಿ ವಿ.ಎಸ್.ಎಸ್. ಎನ್. ಸಹಕಾರ ಸಂಘದ ಕಟ್ಟಡವನ್ನು ದುರಸ್ತಿಗೊಳಿಸುವ ಬಗ್ಗೆ

3756 (4223) : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿರುವ ವಿ.ಎಸ್.ಎಸ್.ಎನ್. ಸಹಕಾರ ಸಂಘಗಳ ಕಟ್ಟಡಗಳು ತೀರಾ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ:

ಆ) ಶಿಥಿಲಾವಸ್ಥೆಯಲ್ಲಿರುವ ಕಟ್ಟಡದಲ್ಲಿ ಕೆಲಸ ನಿರ್ವಹಿಸಲು ಸಾಧ್ಯವಾಗದೇ ಸದಸ್ಯರು ನೌಕರರು ತುಂಬಾ ಸಂಕಷ್ಟ ಸ್ಥಿತಿಯಲ್ಲಿರುವುದು ನಿಜವಲ್ಲವೇ:

ಇ) ಹಾಗಿದ್ದರೆ ಈ ಕಟ್ಟಡವನ್ನು ದುರಸ್ತಿಗೊಳಿಸಿ ಅನುಕೂಲ ಮಾಡಿಕೊಡುವುದು ಯಾವಾಗ? ಇದಕ್ಕೆ ತಗಲುವ ವೆಚ್ಚವೆಷ್ಟು? (ವಿವರ ಒದಗಿಸುವುದು)

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಶಿಥಿಲಾವಸ್ಥೆಯಲ್ಲಿ ಯಾವ ಕಟ್ಟಡವೂ ಉದ್ಭವಿಸುವುದಿಲ್ಲ ಆದರೆ ಬೆಸಲಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘ(ನಿ). ಇದರ ಗೋದಾಮು ಕಟ್ಟಡದ ಮೇಲ್ಚಾವಣಿಯು ದುರಸ್ತಿಯಾಗಬೇಕಾಗಿದೆ.

ಜನರಿಗೆ ಉದ್ಯೋಗ ಮತ್ತು ಜಾನುವಾರುಗಳಿಗೆ ಮೇವು

3768 (4248) : ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚೆಗೆ ಬಂದ ಬರಗಾಲ ದಿಂದ ತೊಂದರೆಗೀಡಾದ ಜನರಿಗೆ ಉದ್ಯೋಗವನ್ನು ಮತ್ತು ಜಾನುವಾರುಗಳಿಗೆ ಮೇವನ್ನು ಪೂರೈಕೆ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು:

ಆ) ಹಾಗೂ ಯಾವ ಜಿಲ್ಲೆಗಳಲ್ಲಿ ಹಾಗೂ ಯಾವ ಸ್ಥಳಗಳಲ್ಲಿ ಗೋಶಾಲೆಗಳನ್ನು ತೆರೆಯಲು ಸರ್ಕಾರವು ಕ್ರಮಗಳನ್ನು ತೆಗೆದುಕೊಂಡಿದೆ: ವಿವರಗಳನ್ನು ಒದಗಿಸುವುದು: ಇದಕ್ಕಾಗಿ ಒಟ್ಟು ತಗಲಬಹುದಾದ ಹಣವೆಷ್ಟು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇರುವುದರಿಂದ ಉದ್ಯೋಗ ಸೃಜನೆ ಹಗೂ ಇನ್ನಿತರ ಪ್ರಕೃತಿ ವಿಕೋಪ ಪರಿಹಾರ ಉದ್ದೇಶಕ್ಕಾಗಿ CRF/NCCF ನಿಧಿಯಿಂದ 2002–2003ರಲ್ಲಿ ರೂ. 192.31 ಕೋಟಿ ಮತ್ತು 2002–2003–04 ರಲ್ಲಿ ಇದುವರೆಗೆ ರೂ.106.40 ಕೋಟಿ ಅನುಧಾನವನ್ನು ಹಾಗೂ 7,20 ಲಕ್ಷ ಮೆ.ಟನ್ ಆಹಾರಧಾನ್ಯ ಬಿಡುಗಡೆ ಮಾಡಲಾಗಿದೆ. ಹಾಗೂ ಜಾನುವಾರುಗಳಿಗೆ ಮೇವು ಪೂರೈಕೆಗಾಗಿ ಮೇವು ಬ್ಯಾಂಕ/ ಗೋಶಾಲೆ, ಔಷಧಿ ಖರೀದಿ ಇತ್ಯಾದಿ ಉದ್ದೇಶಕ್ಕಾಗಿ ರೂ. 875.00 ಲಕ್ಷ ಬಿಡಗಡೆ ಮಾಡಲಾಗಿದೆ.

ಆ) ಕೆಳಕಂಡ ಜಿಲ್ಲೆ ತಾಲ್ಲೂಕು ಮತ್ತು ಸ್ಥಳಗಳಿಗೆ ರಾಜ್ಯಾದ್ಯಂತ ಒಟ್ಟು 10 ಗೋಶಾಲೆಗಳನ್ನು ತೆರೆಯಲಾಗಿದೆ.